ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-6 Issue 3, November-December 2024, Pp.13-22
©*IIMRD*, Mysuru

www.iimrd.com

# ಕರ್ನಾಟಕ ಮೂಢನಂಬಿಕೆ ಆಚರಣೆಗಳ ಪ್ರತಿಬಂಧಕ ವಿಧೇಯಕ 2013: ಒಂದು ವಿಶ್ಲೇಷಣೆ

**ತೃಪ್ತಿ ಹೆಚ್. ಪಿ**

ಸಂಶೋಧನಾ ವಿದ್ಯಾರ್ಥಿನಿ, ಇತಿಹಾಸ ಅಧ್ಯಯನ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

**ಸಾರಾಂಶ: (Abstract)**

*ಮೌಢ್ಯಾಚರಣೆಗಳು ಸಾಮಾನ್ಯ ಜನತೆಯನ್ನು ಹೆಚ್ಚು ಆವರಿಸಿರುವುದರಿಂದ ಆರ್ಥಿಕ ಪ್ರಗತಿಗೆ ಹಾನಿಯಾಗುತ್ತದೆ. ಹೀಗಾಗಿ ಜಾಗೃತಿ ಮೂಡಿಸುವ ಕೆಲಸ ಬರದಿಂದ ಸಾಗಬೇಕು. ಸುಂದರ ಬದುಕನ್ನು ಹೊಂದಲು ಅಡ್ಡಿಯನ್ನುಂಟು ಮಾಡುವ ಆಚರಣೆಗಳನ್ನು ಕೈಬಿಡಬೇಕು. ಪ್ರತಿಫಲಾಪೇಕ್ಷೆಯ ಹೆಸರಿನಲ್ಲಿ ನಡೆಯುವ ಆಚರಣೆ ಮಾನವನ ಬದುಕನ್ನು ದುರಂತದೆಡೆಗೆ ನಿಲ್ಲಿಸುತ್ತದೆ. ಮಾನಸಿಕ ನೆಮ್ಮದಿಗಾಗಿ ಹುಟ್ಟಿಕೊಂಡ ಎಲ್ಲಾ ಆಚರಣಾ ಮಾರ್ಗಗಳು ಸುಲಿಗೆಯ ಪ್ರವೃತ್ತಿಯನ್ನೊಂದಿವೆ. ಇದರಿಂದಾಗಿ ದಲಿತ ಬಂಡಾಯ ಮತ್ತು ಪ್ರಗತಿಪರ ಸಂಘಟನೆಗಳು ಪ್ರತಿಯೊಂದು ಆಚರಣೆಗೂ ವೈಚಾರಿಕ ಅರ್ಥವನ್ನು ಮನದಟ್ಟು ಮಾಡಿಸಿ ಆರ್ಥಿಕ ನಷ್ಟವನ್ನು ತಡೆದು ಮಾನವನ ಬದುಕನ್ನು ಸುಂದರವಾಗಿಸುವ ಸಂಘಟಕರಾಗಿ ನಮಗೆ ಕಂಡುಬರುತ್ತಾರೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಲೇಖನದಲ್ಲಿ ಕರ್ನಾಟಕದ ಮೂಢನಂಬಿಕೆ ಆಚರಣೆಗಳ ಪ್ರತಿಬಂಧಕ ವಿಧೇಯಕ 2013ನ್ನು ಐತಿಹಾಸಿಕವಾಗಿ ವಿಶ್ಲೇಷಣೆ ಮಾಡಲಾಗಿದೆ.*

**ಮುಖ್ಯಪದಗಳು (Keywords):** ಭಾರತೀಯ ಸಮಾಜ, ಕರ್ನಾಟಕ, ಮೌಢ್ಯಾಚರಣೆಗಳು, ಮೂಢನಂಬಿಕೆ ಆಚರಣೆಗಳ ಪ್ರತಿಬಂಧಕ ವಿಧೇಯಕ 2013.

## ಪೀಠಿಕೆ

ಒಂದು ಸಮಾಜ ಸುಧಾರಣೆಯಾಗಬೇಕಾದರೆ ಮೊದಲು ಅಲ್ಲಿ ಬೇರೂರಿದ್ದ ಮೌಢ್ಯ ಮತ್ತು ಅಜ್ಞಾನಗಳನ್ನು ತೊಡೆದು ಹಾಕುವುದು ತೀರ ಅಗತ್ಯ. ಕೆಳವರ್ಗಗಳಲ್ಲಿ ಮೌಢ್ಯಗಳು ಅವರ ಸಾಮಾಜಿಕ ಬದುಕಿಗೆ ಮಾರಕವಾಗಿದ್ದವು. ಇಂತಹ ಮೂಢ ಆಚರಣೆಗಳಿಂದ ಆರ್ಥಿಕ ಸಂಪತ್ತು ಪೋಲಾಗುತ್ತಿದ್ದು, ಜನಸಾಮಾನ್ಯರು ಆರ್ಥಿಕವಾಗಿ ಹಿಂದುಳಿಯಲು ಕಾರಣವಾಗಿತ್ತು. ಇಂಥ ನಿಷ್ಪ್ರಯೋಜಕ ಆಚರಣೆಗಳಿಂದ ಜನತೆಯನ್ನು ಮುಕ್ತಗೊಳಿಸಿ ವಿಚಾರವಂತಿಕೆ ಬೆಳೆಸುವುದು ಅಗತ್ಯವಿತ್ತು. ಮಾನವ ತನ್ನ ಶ್ರಮಶಕ್ತಿ, ಆರ್ಥಿಕ ಸಂಪತ್ತನ್ನು ಆಚರಣೆಗಳಿಗೆ ವ್ಯರ್ಥಗೊಳಿಸದಂತೆ ಕರ್ನಾಟಕ ಸರ್ಕಾರ ಮೌಢ್ಯ ನಿಷೇಧ ಕಾನೂನುಗಳನ್ನು ಪೂರ್ಣ ಪ್ರಮಾಣದಲ್ಲಿ ಜಾರಿ ಮಾಡಬೇಕಾಗಿದೆ.

*Please cite this article as:* ತೃಪ್ತಿ ಹೆಚ್. ಪಿ. (2024). ಕರ್ನಾಟಕ ಮೂಢನಂಬಿಕೆ ಆಚರಣೆಗಳ ಪ್ರತಿಬಂಧಕ ವಿಧೇಯಕ 2013: ಒಂದು ವಿಶ್ಲೇಷಣೆ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 6(3). ಪು.ಸಂ.* 13–22

**ಪ್ರತಿಬಂಧಕ ವಿಧೇಯಕ 2013**

ಮಹಾರಾಷ್ಟ್ರದ ಹೆಸರಾಂತ ವಿಚಾರವಾದಿ ನರೇಂದ್ರ ಅಚ್ಯುತ ದಾಭೋಲ್ಕರ್. ಮಹರಾಷ್ಟ್ರ ಅಂಧಶ್ರದ್ಧಾ ನಿರ್ಮೂಲನ ಸಮಿತಿಯ ಸ್ಥಾಪಕ ಅಧ್ಯಕ್ಷರಾಗಿದ್ದರು. ಮೂಢನಂಬಿಕೆಗಳ ವಿರುದ್ಧ ಅವರ ಕೆಚ್ಚೆದೆಯ ಹೋರಾಟದಿಂದಾಗಿ ಅವರು ಅನೇಕ ಜನ ಪಟ್ಟಭದ್ರಹಿತಾಸಕ್ತಿಗಳ ವೈರತ್ವವನ್ನು ಕಟ್ಟಿಕೊಂಡಿದ್ದರು. ಇದರ ಪರಿಣಾಮವಾಗಿ ನರೇಂದ್ರ ದಾಭೋಲ್ಕರ್ ಆಗಸ್ಟ್ 20, 2013ರಲ್ಲಿ ಹತ್ಯೆಯಾದರು. ಇದಕ್ಕೆ ಇಡೀ ದೇಶದಲ್ಲಿ ಜನತೆಯಲ್ಲಿ ಉಂಟಾದ ವ್ಯಾಪಕ ಪ್ರತಿಕ್ರಿಯೆಯ ಒತ್ತಡಕ್ಕೆ ಮಣಿದು, ದಾಭೋಲ್ಕರ್ ಹತ್ಯೆಯಾ ನಾಲ್ಕೇ ದಿನಗಳ ನಂತರ ಮಹಾರಾಷ್ಟ್ರ ಸರ್ಕಾರ ಬ್ಲಾಕ್‌ಮ್ಯಾಜಿಕ ಅರ್ಡಿನೆನ್ಸ್ ಎಂಬ ಸುಗ್ರೀವಾಜ್ಞೆಯನ್ನು ಹೊರಡಿಸಿದೆ. 2014ರ (ಮರಣಾನಂತರ) ಪದ್ಮಶ್ರೀ ಪ್ರಶಸ್ತಿಯನ್ನೂ ನರೇಂದ್ರ ದಾಭೋಲ್ಕರ್‌ರಿಗೆ ನೀಡಿದೆ. ಇದರ ಒಂದು ಪ್ರತಿಧ್ವನಿಯಾಗಿ ಕರ್ನಾಟಕದಲ್ಲಿಯೂ ವಿಚಾರವಾದಿಗಳು ದಾಭೋಲ್ಕರ್ ಅವರ ಹತ್ಯೆಯನ್ನು ಖಂಡಿಸಿ ಪ್ರತಿಭಟನೆಯನ್ನು ನಡೆಸಿದರು. ವಿಚಾರ ಸಂಕೀರಣಗಳನ್ನು ನಡೆಸಿದರು. ಇದಕ್ಕೆ ಪ್ರತಿಕ್ರಿಯೆಯಾಗಿ ರಾಜ್ಯದ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಮೂಢನಂಬಿಕೆ ಆಚರಣೆಗಳನ್ನು ಪ್ರತಿಬಂಧಿಸುವ ಕುರಿತು ಒಂದು ಕಾನೂನನ್ನು ಜಾರಿಗೆ ತರುವುದಾಗಿ ಆಶ್ವಾಸನೆ ನೀಡಿದರು. ಮುಂದಿನ ದಿನಗಳಲ್ಲಿ ಸೇರಲಿರುವ ವಿಧಾನ ಸಭೆಯಲ್ಲಿ ಇದನ್ನು ಮಂಡಿಸುವುದಾಗಿಯೂ ಹೇಳಿಕೆಯನ್ನು ನೀಡಿದರು.

ಮೂಢನಂಬಿಕೆಗಳ ವಿಚಾರವಾಗಿ ಕಾನೂನನ್ನು ತರುವುದು ಇತರ ಸಂಗತಿಗಳ ಹಾಗೆ ಸುಲಭವಲ್ಲ ಎಂದು ಎಲ್ಲರಿಗೂ ಗೊತ್ತು. ಮೊದಲನೆದಾಗಿ, ಮೂಢನಂಬಿಕೆ ಎಂದರೇನು? ಎನ್ನುವುದರ ಬಗ್ಗೆ ಒಮ್ಮತದ ಒಂದು ಪರಿಭಾಷೆಯನ್ನು ಒಪ್ಪಿಕೊಳ್ಳಬೇಕಾಗಿತ್ತು. ಎಲ್ಲರೂ ತಾವು ಆಚರಿಸುವುದು ನಂಬಿಕೆ, ಇತರರದು ಮೂಢನಂಬಿಕೆ ಎಂದುಕೊಳ್ಳುತ್ತ ಅನೇಕ ಬಗೆಯ ಕುರುಡುನಂಬಿಕೆಗಳನ್ನು ಆಚರಿಸುವವರೇ ಆಗಿದ್ದಾರೆ. ಇಂಥ ಸನ್ನಿವೇಶದಲ್ಲಿ ಇದರ ಕುರಿತು ವಿಧೇಯಕದ ಕರಡನ್ನು ವಿಧಾನಸಭೆಯಲ್ಲಿ ಮಂಡಿಸಿದರು. ವಿರೋಧ ಪಕ್ಷಗಳು ಹೋಗಲಿ, ಆಳುವ ಕಾಂಗ್ರೆಸ್ ಪಕ್ಷದವರೇ ಎಷ್ಟು ಜನ ಶಾಸಕರು ಬೆಂಬಲಿಸಿಯಾರು ಎಂಬುದರ ಬಗ್ಗೆ ದಟ್ಟ ಅನುಮಾನಗಳಿದ್ದವು. ಒಮ್ಮೆ ವಿಧೇಯಕವೇನಾದರೂ ಶಾಸನಸಭೆಯ ಎದುರು ಬಂದು ಅದು ಬಹುಮತದ ಕೊರತೆಯಿಂದ ಬಿದ್ದು ಹೋದರೆ, ಅದನ್ನು ಮರಳಿ ತರುವ ಸಾಧ್ಯತೆ ತೀರಾ ಕಡಿಮೆಯಾಗುತ್ತದೆ. ಮಂಡನೆಯಾಗಲಿರುವ ವಿಧೇಯಕವನ್ನೇ ಬಹಳ ಜಾಗರೂಕತೆಯಿಂದ, ಅಧ್ಯಯನವನ್ನು ಆಧರಿಸಿ ರೂಪಿಸಬೇಕಾಗಿತ್ತು. ಇದಕ್ಕೆ ಬಹುಜನರ ಒಮ್ಮತವೂ ಬೇಕಾಗಿತ್ತು. ಎಂದರೆ ಪ್ರಸ್ತಾಪವಿತ ವಿಧೇಯಕದ ವ್ಯಾಪಕವಾದ ಸಾರ್ವಜನಿಕ ಸಂವಾದ ಆಗಬೇಕಾಗಿತ್ತು.

ಸಾರ್ವಜನಿಕ ಸಂವಾದ ಯಾರಿಂದಲಾದರೂ ಆರಂಭವಾಗಬೇಕಾಗುತ್ತದೆ. ಈ ಕೆಲಸವನ್ನು ಬೆಂಗಳೂರಿನಲ್ಲಿರುವ ನ್ಯಾಷಿನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯುನಿವರ್ಸಿಟಿ ಮಾಡಿತು. ಮೂಢನಂಬಿಕೆ ಆಚರಣೆ ಪ್ರತಿಬಂಧಕ ವಿಧೇಯಕವನ್ನು ರಚಿಸುವ ಇಂಗಿತವನ್ನು ಕರ್ನಾಟಕ ಸರ್ಕಾರವು ವ್ಯಕ್ತಪಡಿಸಿತು. ಇದನ್ನು ಅನುಸರಿಸಿ, ರಾಷ್ಟ್ರೀಯ ಕಾನೂನು ತಜ್ಞರು, ವಿಚಾರವಾದಿಗಳು, ಸಾಹಿತಿಗಳು, ಸಮಾಜ ಸೇವಕರು, ಶಿಕ್ಷಣ ತಜ್ಞರು ಮುಂತಾದ 23 ಜನ ಸದಸ್ಯರಿದ್ದರು. ಕಾನೂನು ತರುವ ಮುಂಚೆ ಮೂಢನಂಬಿಕೆ ಎಂದರೇನು? ಎಂಬುದನ್ನು ನಿರೂಪಿಸಬೇಕಾಗಿತ್ತು. ಇದಕ್ಕೆ ಹೆಚ್ಚಿನವರ ಸಹಮತಿಯಾದರೂ ಇರಬೇಕಾಗಿತ್ತು.

ಸಾವಿರಾರು ವರ್ಷಗಳಿಂದ ದೇವರು, ಧರ್ಮ, ವೃತ್ತಿ, ಆರೋಗ್ಯ, ಶ್ರೇಯಸ್ಸು ಎಲ್ಲಾ ವಲಯಗಳಲ್ಲಿ ಅನೇಕ ಬಗೆಯ ಭಾವನೆಗಳನ್ನು ಬೆಳೆಸಿಕೊಂಡು, ಉಳಿಸಿಕೊಂಡು ಬಂದಿರುವ ಬಗ್ಗೆ ಅಷ್ಟು ಸ್ಪಷ್ಟವಾದ ಪರಿಕಲ್ಪನೆ ಇಲ್ಲ. ಅದು ಇದ್ದಿದ್ದರೆ ಕ್ರಮೇಣವಾದರೂ ಮೂಢನಂಬಿಕೆಗಳು ಮರೆಯಾಗುತ್ತಿದ್ದವು. ಅವು ಹೋಗದಿರುವುದಕ್ಕೆ, ಬದಲಿಗೆ ಎಂದಿಗಿಂತ ಹೆಚ್ಚಾಗಿರುವುದಕ್ಕೆ ಜನರಲ್ಲಿ ಅವುಗಳು ಇರುವುದನ್ನೇ ಬಂಡವಾಳ ಮಾಡಿಕೊಂಡು ಕೆಲವರು ತಮ್ಮ ತಿಜೋರಿಗಳನ್ನು ಭರ್ತಿ ಮಾಡಿಕೊಳ್ಳುತ್ತಿರುವುದಕ್ಕೆ ಕಾರಣವೇ ಮೂಢನಂಬಿಕೆಗಳ ಬಗ್ಗೆ ಸ್ಪಷ್ಟ ಪರಿಕಲ್ಪನೆಯ ಸಹಮತದ ಕೊರತೆ. ಎಂದು ಕಾಣುತ್ತದೆ. ನಮಗೆಲ್ಲರಿಗೂ ಗೊತ್ತು, ಮೂಢನಂಬಿಕೆಗಳನ್ನು ಕಾನೂನಿನ ಮೂಲಕ ನಿಷೇಧಿಸಲು ಸಾಧ್ಯವಿಲ್ಲ. ಅಂತೀಂದ್ರಿಯ, ಅತಾರ್ಕಿಕ ನಂಬಿಕೆಗಳನ್ನು ಆಧರಿಸಿದ ಮೂಢಚರಣೆಗಳನ್ನು ಬೇಕಾದರೆ ನಿಯತ್ರಿಸಬಹುದು. ಅದರಲ್ಲೂ ವ್ಯಕ್ತಿಗಳ ಮಾನಸಿಕ ವೇದನೆ. ಗೌರಚನಷ್ಟು ಆರ್ಥಿಕಹಾನಿ, ಪ್ರಾಣಹಾನಿಗೆ ಕಾರಣವಾಗುವಂಥ ಮೂಢಾಚರಣೆಗಳನ್ನಾದರೂ ತಡೆಗಟ್ಟ ಬಹುದಲ್ಲವೇ? ವಾಸ್ತವವಾಗಿ ಇಂಥ ಕ್ರೂರ ಆಚರಣೆಗಳಿಗೂ ದೇವರು, ಧರ್ಮಕ್ಕೂ ಯಾವುದೇ ಸಂಬಂಧವಿಲ್ಲ. ಆದರೆ ಹಾಗೆಂದು ಸುಳ್ಳು ಹೇಳಿ ಸಂಪ್ರದಾಯದ ಹೆಸರಿನಲ್ಲಿ ಇಂಥ ಆಚರಣೆಗಳನ್ನು ಮುಗ್ಧ ಜನರ ಮೇಲೆ, ಆದರಲ್ಲೂ ಹೆಣ್ಣುಮಕ್ಕಳು, ಮಕ್ಕಳ ಮೇಲೆ ಹೇರಿ, ಅವರನ್ನು ಹಿಂಸಿಸಿ ಅನಂದ ಪಡುವ ಜನರನ್ನು ಹಿಡಿದು ಶಿಕ್ಷಿಸಬಹುದಲ್ಲವೇ? ಇಂಥವರ ಕ್ರೂರ ಹಿಡಿತದಿಂದ ಅರಿಯದ ಜನರನ್ನು ವಿಮೋಚನೆಗೊಳಿಸಬಹುದಲ್ಲವೇ?.

ಇದನ್ನ ಅನುಸರಿಸಿ ಸಲಹಾ ಸಮಿತಿಯು ವ್ಯಾಪಕವಾಗಿ ಪ್ರಚಾರಕೊಟ್ಟು ಜನರಿಂದಲೇ ತಮಗೆ ಗೊತ್ತಿರುವ, ತಮ್ಮ ಸುತ್ತಮುತ್ತ ಪ್ರಚಲಿತವಿರುವ ಇಂಥ ಶೋಷಣಾತ್ಮಕ, ಹಿಂಸಾತ್ಮಕ ಮೂಢನಂಬಿಕೆಗಳನ್ನು ಸಂಗ್ರಹಿಸಲಾಯಿತು. ಸಹಜವಾಗಿಯೇ ಅವುಗಳಲ್ಲಿ ಎಲ್ಲಾ ಬಗೆಯ ವೈಯಕ್ತಿಕ, ಹಾನಿಕಾರಕವಲ್ಲದ, ಚಿಕ್ಕದೊಡ್ಡ ನಂಬಿಕೆಗಳಿದ್ದವು. ಮೂಢನಂಬಿಕೆಗಳು ಇಟ್ಟುಕೊಳ್ಳುವುದು ಯಾರಿಗೇ ಆಗಲಿ ಯಾವುದೇ ಹಿತವಿಲ್ಲ. ಇದ್ದರೆ ಅದು ಕೇವಲ ತಾತ್ಕಾಲಿಕ ಭ್ರಮೆ, ಅದನ್ನು ತೊಡೆದು ಹಾಕಿ ಸ್ವಪ್ರಯತ್ನದಿಂದ ಅದಷ್ಟು ಆತ್ಮವಿಶ್ವಾಸದಿಂದ ಬದುಕುವುದನ್ನು ಕಲಿತರೆ, ಬದುಕುವ ಅನಿವಾರ್ಯಕ್ಕಾಗಿಯಾದರೂ ನಾವು ಹೆಚ್ಚು ಹೆಚ್ಚು ಸಮರ್ಥರಾಗುತ್ತಾ ಹೋಗುತ್ತೇವೆ ಎಂದೆಲ್ಲ ನಾವು ಈ ಹಿಂದಿಯೆ ಕಲಿಸಿದ್ದೇವೆ. ಆದರೆ ಕೇವಲ ವೈಯಕ್ತಿಕ ವಲಯದಲ್ಲಿ ಮಾತ್ರ ಜಾರಿಯಲ್ಲಿರುವ ಮೂಢನಂಬಿಕೆಗಳನ್ನು ಕಾನೂನು ಮಾಡಿ ತಡೆಯಲು ಹೇಗೆ ಸಾಧ್ಯ? ಆದ್ದರಿಂದ ಒಬ್ಬರು ಆಚರಿಸುವ, ಪ್ರಚೋದಿಸುವ, ಪ್ರಭಾವಿಸುವ ಮೂಢಾಚರಣೆಯಿಂದ ಇನ್ನೊಬ್ಬ ವ್ಯಕ್ತಿಗೆ ಹಾನಿಯಾಗಿರಬೇಕು–ಅಂಥ ಮೂಢಾನಂಬಿಕೆಗಳನ್ನು ಪ್ರತಿಬಂಧಿಸಲು ಸಾಧ್ಯ, ಇತರ ಸಾಮಾಜಿಕ, ನೈಸರ್ಗಿಕ ನ್ಯಾಯಗಳು ಇದರ ಬೆಂಬಲಕ್ಕೆ ಇರುತ್ತವೆ.

ಜನರಿಂದ ಕಲೆಹಾಕಿದ ಮೂಢನಂಬಿಕೆಗಳ ಪಟ್ಟಿಯನ್ನು ಕಾನೂನು ವ್ಯಾಪ್ತಿಯಲ್ಲಿ ತಜ್ಞರ ಒಂದು ಕೋರ್ ಸಮಿತಿಗೆ ಒಪ್ಪಿಸಿ ಅವುಗಳಲ್ಲಿ ಯಾವುದನ್ನು ಕಾನೂನಿನ ವ್ಯಾಪ್ತಿಯಲ್ಲಿ ತರಬಹುದು, ಯಾವುದರ ಮೇಲೆ ಪ್ರತಿಬಂಧವನ್ನು ಹೇರಬಹುದು ಶಿಕ್ಷಾರ್ಹ ಅಪರಾಧಗಳೆಂದು ಪರಿಗಣಿಸಬಹುದು, ಯಾವುದು ಈಗಾಗಲೇ ಜಾರಿಯಲ್ಲಿರುವ ಇತರ ಕಾಯ್ದೆಗಳ ವ್ಯಾಪ್ತಿಯಲ್ಲಿ ಬಂದಿಲ್ಲ–ಇವೆಲ್ಲವನ್ನೂ ಪರಿಶೀಲಿಸಿ ಆ ತಜ್ಞರ ಸಮಿತಿ ಹಾನಿಕರ, ಶೋಷಣಾತ್ಮಕ ಹಾಗೂ ಮಾನವನ ಘನತೆಗೆ ಕುಂದುಂಟುಮಾಡುವ ರೀತಿಯ ಮೂಢಾಚರಣೆಗಳನ್ನು ಮಾತ್ರ ಆಯ್ಕೆ ಮಾಡಿತು. ಮುಂದೆ ಮೂಢಾಚರಣೆಗಳ ನಿವಾರಣೆ ಮಾಡುವುದನ್ನು

ಖಚಿತಪಡಿಸಿಕೊಳ್ಳುವುದಕ್ಕಾಗಿ ರಾಜ್ಯ ಮಟ್ಟದಲ್ಲಿ ಕರ್ನಾಟಕ ಮೂಢನಂಬಿಕೆ ವಿರೋಧಿ ಪ್ರಾಧಿಕಾರವನ್ನು ಮತ್ತು ಜಿಲ್ಲಾ ಮಟ್ಟದಲ್ಲಿ ಮೂಢಾಚರಣೆಗಳ ಬಗೆಗಿನ ಜಾಗೃತಿ ಸಮಿತಿಗಳನ್ನು ಸ್ಥಾಪಿಸುವುದಕ್ಕಾಗಿ ಮೂಢಾಚರಣೆಗಳ ದುಷ್ಪರಿಣಾಮಗಳನ್ನು ಬಯಲಿಗೆಳೆಯುವವರಿಗೆ ರಕ್ಷಣೆ ನೀಡುವುದಕ್ಕಾಗಿ ಮತ್ತು ಮೂಢಾಚರಣೆಗಳ ಪರಿಣಾಮಗಳ ಬಗ್ಗೆ ತಿಳುವಳಿಕೆಯನ್ನು ಮೂಡಿಸುವುದಕ್ಕಾಗಿ ಹಾಗೂ ಅದಕ್ಕೆ ಸಂಬಂಧಿಸಿದ ಅಥವಾ ಅದಕ್ಕೆ ಪ್ರಾಸಂಗಿಕವಾದ ವಿಷಯಗಳ ಬಗ್ಗೆ ವಿಶೇಷ ಉಪಬಂಧಗಳನ್ನು ಕಲ್ಪಿಸುವುದಕ್ಕಾಗಿ ಒಂದು ವಿಧೇಯಕವನ್ನು ರಚಿಸುವ ಉದ್ದೇಶವಾಗಿತ್ತು.

ಇದನ್ನು ಅನುಸರಿಸಿ ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯುನಿವರ್ಸಿಟಿ ಮತ್ತು ಅದರೊಂದಿಗೆ ಕೈಜೋಡಿಸಿದ್ದ ಕಾನೂನು ತಜ್ಞರು ಕರ್ನಾಟಕ ಮೂಢನಂಬಿಕೆ ಆಚರಣೆಗಳ ಪ್ರತಿಬಂಧಕ ವಿಧೇಯಕ 2013 ಎಂಬುದರ ಒಂದು ಕರಡನ್ನು ಸಿದ್ಧಪಡಿಸಿತ್ತು ಹಲವು ಹಂತಗಳ ವಿಚಾರ ವಿನಿಮಯದ ನಂತರ ಕರಡನ್ನು ಮುಖ್ಯಮಂತ್ರಿಗಳಿಗೂ ಒಪ್ಪಿಸಲಾಯಿತು. ಅದೇ ಹೊತ್ತಿಗೆ ಈ ವಿಚಾರವು ಮಾಧ್ಯಮಗಳಲ್ಲಿಯೂ ಬಹಿರಂಗವಾಯಿತು. ಜನ ಸಂಪ್ರದಾಯವಾದಿಗಳು, ಪಂಡಿತರು, ಜ್ಯೋತಿಷಿಗಳು, ಹಲವಾರು ಬುದ್ಧಿ ಜೀವಿಗಳೂ ಸೇರಿದಂತೆ ಹಲವಾರು ಜನ ಸರ್ಕಾರದ ಈ ನಿಲುವನ್ನೇ ಪ್ರತಿಭಟಿಸಿ ಪತ್ರಿಕೆಗಳಲ್ಲಿ ಖಾರವಾಗಿ ಬರೆದರು. ಈ ಕರಡನ್ನು ತಯಾರಿಸಿದ ಸಮಿತಿಯ ಅರ್ಹತೆಯನ್ನು ಪ್ರಶ್ನಿಸಿದರು. ಈ ಕಾನೂನು ಹಿಂದೂ ಧರ್ಮ ವಿರೋಧಿಯಾಗಿದೆ. ದೇವರ ವಿರೋಧಿಯಾದೆ, ನಮ್ಮ ಸಂಸ್ಕೃತಿಯ ವಿರೋಧಿಯಾಗಿದೆ. ನಾಸ್ತಿಕರೆಲ್ಲಾ ಸೇರಿಕೊಂಡು ರಂಗೋಲಿ ಇಡುವುದು, ಪೂಜೆ ಮಾಡುವುದು, ಮಾಂಗಲ್ಯವನ್ನು ಧಾರಣೆ ಮಾಡುವುದು, ದೇವಸ್ಥಾನಕ್ಕೆ ಹೋಗುವುದು ಮುಂತಾದ ನಮ್ಮ ಸಾಂಪ್ರದಾಯಿಕ ನಡೆನುಡಿಗಳನ್ನೆಲ್ಲಾ ಅಪರಾಧವೆಂದು ಕರೆದು ನಿಷೇಧಿಸಲು ಹೋರಟಿದ್ದಾರೆ ಎಂದೆಲ್ಲಾ ಬೊಬ್ಬೆ ಇಟ್ಟರು. ಇವರ ಹಿತದೊಂದಿಗೆ ಹೊಂದಾಣಿಕೆಯಿದ್ದ ಕೆಲವು ಪತ್ರಿಕೆಗಳು ದೊಡ್ಡ ದೊಡ್ಡ ಲೇಖನಗಳನ್ನೂ ಪ್ರಕಟಿಸಿದರು. ಆದರೆ ದೊಡ್ಡ ವಿಪರ್ಯಾಸ ಸಂಗತಿಯೆಂದರೆ ಇವರು ವಿಧೇಯಕವನ್ನು ಟೀಕಿಸಲು ನೀಡಿದ್ದ ಉದಾಹರಣೆಗಳು ಯಾವುದೂ ಅದರಲ್ಲಿ ಇರಲ್ಲಿಲ್ಲ ಎನ್ನುವುದು ಎಂದರೆ ಹೆಚ್ಚಿನವರು ವಿಧೇಯಕದ ಕರಡನ್ನೇ ನೋಡಿರಲಿಲ್ಲ. ಇದನ್ನು ಅಂಥವರ ಗಮನಕ್ಕೆ ತಂದು ನಾನು ಪ್ರಜಾವಾಣಿಗೆ ಕಳಿಸಿದ ಲೇಖನ ಪ್ರಜಾವಾಣಿಯಲ್ಲಿ ಸಂಗತದಲ್ಲಿ ಪ್ರಕಟವಾಗಿತ್ತು. ಅದು ಹೀಗಿತ್ತು. ಕುಂಬಳಕಾಯಿ ಕಳ್ಳ ಎಂದರೆ ಹೆಗಲು ಮುಟ್ಟಿ ನೋಡಿಕೊಂಡ ಎಂಬ ಇಂದು ಗಾದೆಯಿದೆ. ಕಳ್ಳನಿಗೆ ಕಳ್ಳ ಎಂದರೆ ಉಳಿದವರು ಹೆಗಲು ಮುಟ್ಟಿ ನೋಡಿಕೊಂಡರೆ ತಪ್ಪು ಯಾರದು? ಮೂಢನಂಬಿಕೆ ನಿಷೇಧ ಮಸೂದೆಯ ಸಂದರ್ಭದಲ್ಲಿ ಆಗಿರುವುದು ಹೀಗೆಯೇ. ಮೊದಲನೆಯದಾಗಿ ಸರ್ಕಾರವು ನಿಷೇಧಿಸಲು ನೋಡುತ್ತಿರುವುದು ದೇವರು, ಧರ್ಮವನ್ನಲ್ಲ; ಅಧರ್ಮವನ್ನು ನಂಬಿಕೆಗಳನ್ನಲ್ಲ ಮೂಢನಂಬಿಕೆಗಳನ್ನು ಮಾಧ್ಯಮಗಳಲ್ಲಿ ಆಗುತ್ತಿರುವ ಚರ್ಚೆಯಲ್ಲಿ ಭಾಗವಹಿಸುವ ಅನೇಕ ಮಂದಿಗೆ ಮೂಲಭೂತ ವಿಚಾರವೇ ಗೊತ್ತಿರುವಂತೆ ಕಾಣುವುದಿಲ್ಲ.

ಎರಡನೆಯದಾಗಿ ರಾಷ್ಟ್ರೀಯ ಕಾನೂನು ಶಾಲೆ ಒಂದು ಸಮಿತಿಯನ್ನು ರಚಿಸಿಕೊಂಡು ಸಿದ್ಧಪಡಿಸಿರುವುದು ಒಂದು ಕರಡು. ಅದನ್ನೇ ಸರ್ಕಾರ ಒಪ್ಪಿಕೊಳ್ಳುವುದಿಲ್ಲ; ಕಾನೂನು ಆಗುವಾಗ ಅದನ್ನು ಸರ್ಕಾರ ಕಾನೂನು ಇಲಾಖೆಯೇ ರಚಿಸುತ್ತದೆ. ಅಲ್ಲದೇ ಮುಖ್ಯಮಂತ್ರಿಗಳು ಇದಕ್ಕೇನೂ ಅವಸರವಿಲ್ಲ, ಸಕಾಲದಲ್ಲಿ ವಿಧೇಯಕವು ಕಾನೂನು ಬದ್ಧವಾಗಿಯೇ ರಚಿಸಲ್ಪಟ್ಟು ಶಾಸನಸಭೆಗಳಲ್ಲಿ ಚರ್ಚಿತವಾಗಿ

ಅನುಮೋದನೆ ಪಡೆದ ನಂತರವೇ ತರಲಾಗುವುದು ಎಂಬ ಮಾತನ್ನು ಹಲವಾರು ವೇದಿಕೆಗಳಲ್ಲಿ ಹೇಳಿದ್ದಾರೆ. ಇವೆಲ್ಲವನ್ನೂ ಅರಿಯದೇ ರಾಷ್ಟ್ರೀಯ ಕಾನೂನು ಶಾಲೆಯು ಒಪ್ಪಿಕೊಂಡಿರುವ ಕರಡನ್ನು ಓದದೆಯೇ ಮಾತಾಡುವುದು, ಬರೆಯುವುದು, ಅಂಥ ನಿರಾಧಾರವಾದಂಥ ಬರಹಗಳನ್ನು ಪ್ರಕಟಿಸುವುದೂ ಸೂಕ್ತವಲ್ಲ. ದಯವಿಟ್ಟು ಆ ಕರಡನ್ನು ಓದಿ ಅದರಲ್ಲಿ ನಂಬಿಕೆ ಯಾವುದು, ಮೂಢನಂಬಿಕೆ ಯಾವುದು ಎಂಬುದರ ಸ್ಪಷ್ಟ ಪರಿಭಾಷೆಯಿದೆ. ಮುಂದೆ ವಿಭಾಗಗಳ ಅಡಿಯಲ್ಲಿ ಸುಮಾರು 11 ಬಗೆಯ ಮೌಢ್ಯಗಳನ್ನು ಪಟ್ಟಿ ಮಾಡಿದ್ದಾರೆ. ಇವುಗಳನ್ನು ನಾವು ಒಪ್ಪುತ್ತೇವೋ ಇಲ್ಲವೋ ಎಂಬುದು ಚರ್ಚೆ ಆಗಬೇಕು, ಅದೇ ಕರಡಿನ ಆಶಯವೂ ಕೂಡ.

ಕರಡಿನಲ್ಲಿ ಎಲ್ಲಿಯೂ ದೇವರು, ಧರ್ಮದ ಮೇಲಿನ ವೈಯಕ್ತಿಕ ನಂಬಿಕೆಗಳ ವಿರುದ್ಧ ಚಕಾರವೆತ್ತಿಲ್ಲ. ಅದೇ ದೇವರು ಧಾರ್ಮಿಕ ಆಚರಣೆಗಳ ವ್ಯಾಪಾರೀಕರಣ, ಅದನ್ನು ಅಸ್ತ್ರವನ್ನಾಗಿ ಬಳಸಿ ಮಾಡುವ ಅನ್ಯಾಯ, ಅತ್ಯಾಚಾರ, ಕೊಲೆ, ಹಿಂಸಾಚಾರ, ಮೋಸ ಇವುಗಳ ನಿಷೇಧದ ಬಗ್ಗೆ ಸಲಹೆ ಇದೆ. ಯವುದೇ ದೇವರು, ಯಾವುದೇ ಧರ್ಮದ ಬಗ್ಗೆ ನಿಜವಾದ ಭಕ್ತಿ, ನಂಬಿಕೆ ಇರುವಂಥಹವರು ಸಮಾಜದಲ್ಲಿ ದೇವರು ಧರ್ಮ ಆಚರಣೆ, ನಂಬಿಕೆ ಅನಾಚಾರಕ್ಕೆ ಬಳಸುತ್ತಿರುವುದನ್ನು ವಿರೋಧಿಸಬೇಕೇ ಅಥವಾ ಅದರ ಪರವಾಗಿ ಮಾತಾನಾಡಬೇಕೇ?. ಧರ್ಮದ ಮೇಲಿನ ಅತ್ಯಾಚಾರವನ್ನು ತಡೆಯಲು ನಮಗೆಲ್ಲ ಸಿಕ್ಕಿರುವ ಮೊಟ್ಟಮೊದಲ ಅಧಿಕೃತವಾದ ಅವಕಾಶವನ್ನು ಕಳೆದುಕೊಳ್ಳುವುದು ಬೇಡ. ಧರ್ಮದ ಮಾರ್ಗದಲ್ಲಿ ನಡೆಯುತ್ತಿರುವ ಯಾವುದೇ ವ್ಯಕ್ತಿ, ಸಂಸ್ಥೆಗಳಿಗೆ ಈ ಕಾನೂನಿನಿಂದ ಯಾವುದೇ ಆತಂಕ ಇರಬೇಕಾಗಿಲ್ಲ. ಪ್ರಸ್ತಾವಿಕ ಕಾಯ್ದೆ ಬಗ್ಗೆ ಊಹಾಪೋಹಗಳನ್ನು ಮಾಡುತ್ತಾ, ಜನರಲ್ಲಿ ಗೊಂದಲವನ್ನು ಹರಡುವುದು ಬೇಡ. ಪತ್ರಿಕೆಗಳು ನಿರಾಧಾರವಾದ ಚರ್ಚೆಗಳನ್ನು ಪ್ರಕಟಿಸುವುದಕ್ಕಿಂತ ಪ್ರಸ್ತಾಪವಿತ ಟಿಪ್ಪಣಿಯ ಮೂಲಪಾಠವನ್ನಾದರೂ ಪ್ರಕಟಿಸಿ ಅದನ್ನು ಆಧರಿಸಿ ಚರ್ಚೆಗಳನ್ನು ಆಹ್ವಾನಿಸುವುದು ಅಪೇಕ್ಷಣೀಯ.

ಎಲ್ಲಾ ಧಾರ್ಮಿಕ ಸಂಸ್ಥೆಗಳು, ಪೂಜನೀಯರು, ಸ್ವಾಮಿಗಳು, ಮೌಲ್ವಿಗಳು, ಖಾದ್ರಿಗಳು ಇತರ ಸಾರ್ವಜನಿಕ, ಸಾಮುದಾಯಿಕ ಸಂಸ್ಥೆಗಳು ಈ ಸಲಹಾ ಕರಡು ಪ್ರತಿಯನ್ನು ಪಡೆದುಕೊಂಡು ಅದರ ಕುರಿತು ಗಂಭೀರವಾದ ಚರ್ಚೆಗಳನ್ನು ಮಾಡಿ ಈ ವಿಧೇಯಕದ ಸಾಧ್ಯತೆಯನ್ನು ಸಶಕ್ತಗೊಳಿಸಬೇಕು. ಧರ್ಮ, ದೇವರು, ನಂಬಿಕೆಗಳ ಹೆಸರಿನಲ್ಲಿ ಅಮಾಯಕರ ಮೇಲೆ ಮಾನವ ಹಕ್ಕು, ಘನತೆ, ಮಾನ, ಪ್ರಾಣದ ಮೇಲೆ ನಡೆಯುತ್ತಿರುವ ಉಲ್ಲಂಘನೆಯನ್ನು ತಡೆಯಲು ನಾವು ಸರ್ಕಾರವನ್ನು ಬೆಂಬಲಿಸಬೇಕಾಗಿದೆ. ಸಾತ್ವಿಕರಿಗೂ, ಆಸ್ತಿಕರಿಗೂ, ನಾಸ್ತಿಕರಿಗೂ ಎಲ್ಲರಿಗೂ ಇದೊಂದು ಶತಮಾನಗಳ ನಂತರ ಸಿಕ್ಕ ಅವಕಾಶ ಇದನ್ನು ಕೈಬಿಡುವುದು ಬೇಡ ಈ ವಿಧೇಯಕದ ಸಾಧಕ ಬಾಧಕಗಳ ಬಗ್ಗೆ ಸಾರ್ವಜನಿಕವಾಗಿ ವ್ಯಾಪಕವಾಗಿ ಚರ್ಚೆ ನಡೆಯಬೇಕಾದದ್ದು ಅತ್ಯಗತ್ಯ. ನಾವೆಲ್ಲರೂ ಅದರಲ್ಲಿ ಭಾಗವಹಿಸಬೇಕು ಎಂದರೆ ನಾವು ಅದನ್ನು ಓದಬೇಕು ಅದೇನೂ ಕ್ಲಾಸಿಫೈಡ್ ಅದಂಥ ರಾಷ್ಟ್ರೀಯ ರಹಸ್ಯ ದಸ್ತಾವೇಜಲ್ಲ ಎನ್ನುವ ರಾಷ್ಟ್ರೀಯ ಕಾನೂನು ಶಾಲೆಯ ವೆಬ್‌ಸೈಟ್‌ಗೆ ಹೋದರೆ ಅಲ್ಲಿ ಅದು ಕನ್ನಡ ಮತ್ತು ಇಂಗ್ಲೀಷ್ ಭಾಷೆಯಲ್ಲಿ ಲಭ್ಯ ಹಾಗೆಯೇ ಕರ್ನಾಟಕ ಜ್ಞಾನ ವಿಜ್ಞಾನ ಸಮಿತಿಯೂ ಇದನ್ನು ಪ್ರಕಟಿಸಿ ಸುಲಭ ಬೆಲೆಗೆ ಮಾರಾಟ ಮಾಡುತ್ತಿದೆ. ಆದರೆ ಈ ಕರಡು ವಿಧೇಯಕದಲ್ಲಿ ನಮಗೆ ಇಲ್ಲಿ ಪ್ರಸ್ತುತವಾದ ಭಾಗಗಳನ್ನು ನಾನಿಲ್ಲಿ ಉದ್ಧರಿಸುವುತ್ತಿದ್ದೇನೆ.

ಮೊದಲನೆಯದಾಗಿ ಈ ಕರಡು ವಿಧೇಯಕದಲ್ಲಿ ನಾವು ಗಮನಿಸಬೇಕಾದದ್ದು ಕಾನೂನಿನ ಪ್ರಕಾರ ಯಾವುದನ್ನು ಮೂಢನಂಬಿಕೆ ಆಚರಣೆ ಎಂದು ಪರಿಗಣಿಸಲಾಗುತ್ತಿದೆ. ಎಂಬುದು. ವಿಧೇಯಕದ ಪರಿಭಾಷೆಯ ಪ್ರಕರಣದ (ಜೆ) ಭಾಗದಲ್ಲಿ 'ಮೂಢನಂಬಿಕೆ ಆಚರಣೆ' ಎಂದರೆ ಇನ್ನೊಬ್ಬ ವ್ಯಕ್ತಿ ಅಥವಾ ವ್ಯಕ್ತಿಗಳ ಕಾಯಿಲೆಯನ್ನು ಅಥವಾ ಸಂಕಟವನ್ನು ಪರಿಹರಿಸುವ ಭರವಸೆ ನೀಡಿ ಅಥವಾ ಅವರಿಗೆ ಲಾಭ ಉಂಟಾಗುತ್ತದೆಂದು ತಿಳಿಸಿ ಅಥವಾ ಪ್ರತಿಕೂಲ ಪರಿಣಾಮ ಉಂಟಾಗುತ್ತದೆಂದು ಹೆದರಿಸಿ ಅತಿಮಾನುಷ ಶಕ್ತಿಯನ್ನು ಅಹ್ವಾನಿಸುತ್ತೇವೆ ಎನ್ನುವ ಮೂಲಕ ಅವರಿಗೆ :–

- ತೀವ್ರತರವಾದ ದೈಹಿಕ ಅಥವಾ ಮಾನಸಿಕ ಹಾನಿಯುಂಟು ಮಾಡುವ.
- ಹಣಕಾಸಿನ ಆಥವಾ ಯಾವುದೇ ಲೈಂಗಿಕ ಶೋಷಣೆಯನ್ನುಂಟುಮಾಡುವ.
- ಮನುಷ್ಯನ ಘನತೆಗೆ ಘಾಸಿಯುಂಟುಮಾಡುವ ಯಾವುದೇ ಕೃತ್ಯ ಅಥವಾ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಕೃತ್ಯ

**ವಿಧೇಯಕ ಅಧ್ಯಾಯ–2ರ ಪ್ರಕಾರ, ಮೂಢನಂಬಿಕೆ ಆಚರಣೆ ಮಾಡುವ ಅಪರಾಧ ಎಂಬಲ್ಲಿ.**

ಮೂಢನಂಬಿಕೆ ಆಚರಣೆಯನ್ನು ಉತ್ತೇಜಿಸುವ, ಪ್ರಸಾರ ಮಾಡುವ ಅಥವಾ ನಡೆಸುವುದನ್ನು ಅಪರಾಧ ಎಂದು ಪರಿಗಣಿಸಲಾಗಿದೆ. ಯಾರೇ ವ್ಯಕ್ತಿಯು ಅಥವಾ ಸಂಸ್ಥೆಯು ಇಂಥ ಅಪರಾಧವನ್ನು ಮಾಡಿದ್ದೇ ಆದರೆ ಒಂದು ವರ್ಷದಿಂದ ಐದು ವರ್ಷ ಅವಧಿಯ ಸೆರಮನೆ ವಾಸ ಅಥವಾ ಹತ್ತರಿಂದ ಐವತ್ತು ಸಾವಿರ ರೂಪಾಯಿಯು ಜುಲ್ಮಾನೆ ಅಥವಾ ಎರಡನ್ನೂ ವಿಧಿಸಲಾಗುವುದು ಹಾಗೆಯೇ ಈ ಪ್ರಕರಣದಲ್ಲಿ ಮೂಢನಂಬಿಕೆ ಆಚರಣೆಗೆ ಬಲಿಯಾದ ವ್ಯಕ್ತಿಯ ಸಮ್ಮತಿಯನ್ನು ಪರಿಗಣಿಸಲಾಗುವುದಿಲ್ಲ, ಮತ್ತು ಮೂಢನಂಬಿಕೆಯ ಆಚರಣೆಗೆ ಬಲಿಯಾದ ವ್ಯಕ್ತಿಯು ಈ ಪ್ರಕರಣದಲ್ಲಿ ಅಪರಾಧಿಯಾಗಿರುವುದಿಲ್ಲ.

ನಂತರದ ಅಧ್ಯಾಯಗಳಲ್ಲಿ ಈ ಕಾಯ್ದೆಯನ್ನು ಜಾರಿಗೆ ತರಲು ಅಗತ್ಯವಾದ ರಾಜ್ಯ ಮಟ್ಟದ ಕರ್ನಾಟಕ ಮೂಢನಂಬಿಕೆ ವಿರೋಧಿ ಪ್ರಾಧಿಕಾರ ಮತ್ತು ಪ್ರತಿ ಜಿಲ್ಲಾ ಮಟ್ಟದ ಮೂಢನಂಬಿಕೆ ಆಚರಣೆಗಳ ಬಗಗೆ ಜಾಗೃತ ಸಮಿತಿಗಳ ರಚನೆ, ಅವುಗಳ ರಚನೆ, ಅಧಿಕಾರ ವ್ಯಾಪ್ತಿ, ಜವಾಬ್ದಾರಿಗಳು ಇತ್ಯಾದಿಗಳ ವಿವರವಿದೆ. ಇದರ ಅನುಸೂಚಿಯಲ್ಲಿ ಸಂಜ್ಞೆಯವೆಂದು ಪರಿಗಣಿತವಾಗುವ, ಎಂದರೆ ನ್ಯಾಯಾಲಯದ ವಾರಂಟ್ ಹೊರತಾಗಿಯೂ ಬಂಧಿಸುವುದಕ್ಕೆ ಅರ್ಹವಾದ ಅಪರಾಧಗಳ ಪಟ್ಟಿಯನ್ನು ನೀಡಲಾಗಿದೆ ಅದರ ಪ್ರಕಾರ :

ಎ(1). ಲಾಭಕ್ಕಾಗಿ ಆಥವಾ ದೈವವನ್ನು ಸಂಪ್ರೀತಗೊಳಿಸುವುದಕ್ಕಾಗಿ ಮನುಷ್ಯನನ್ನು ಬಲಿಕೊಡುವುದು.

(2)ಈ ಅಧಿನಿಯಮದಲ್ಲಿ ಏನೇ ಇದ್ದರೂ, ಮನುಷ್ಯನನ್ನು ಬಲಿ ಕೊಡುವ ಆಚರಣೆಗೆ ಶಿಕ್ಷೆಯು ಮರಣ ಅಥವಾ ಜೀವಾವಧಿ ಶಿಕ್ಷೆ ಆಗಿರತಕ್ಕದ್ದು ಮತ್ತು ಜುಲ್ಮಾನೆಯೂ ಇರತಕ್ಕದ್ದು.

(3)ಮನುಷ್ಯ ಬಲಿಯಲ್ಲಿನ ನಂಬಿಕೆಯನ್ನು ಹರಡುವುದು ಅಥವಾ ಮನುಷ್ಯ ಬಲಿಯನ್ನು ಕೊಡುವಂತೆ ಇತರರನ್ನು ಪ್ರೇರೇಪಿಸುವುದು.

ಬಿ) ಕಾಯಿಲೆಯನ್ನು ಗುಣಪಡಿಸಲು ಹಿಂಸಾತ್ಮಕ ರೀತಿಯಲ್ಲಿ ಪ್ರಯತ್ನಿಸುವುದು ಅಥವಾ ಅಹಿಂಸಾತ್ಮಕ ರೀತಿಯಲ್ಲಿ ಭೂತೋಚ್ಚಾಟನೆಯನ್ನು ನಡೆಸುವುದು.

ಸಿ) 1. ಭಾರತ ದಂಡಸಂಹಿತೆ, 1860ರ 297ರ ಪ್ರಕರಣದ ಉಲ್ಲಂಘನೆಯಲ್ಲಿ ಅಘೋರಿ, ಸಿದ್ದುಭುಕ್ತಿ ಅಥವಾ ಸದೃಶ್ಯ ಆಚರಣೆಯನ್ನು ನೆರವೇರಿಸುವುದು.

2. ಆಚರಣೆಯಲ್ಲಿ ತೊಡಗುವಂತೆ ಇತರರನ್ನು ಒತ್ತಾಯಿಸುವುದು.

3. ಆಚರಣೆಗಳಿಂದ ಪಡೆಯಲಾಗಿದೆ ಎನ್ನಲಾದ ಶಕ್ತಿಯ ಭಯವನ್ನು ಉಪಯೋಗಿಸಿಕೊಂಡು ಆರ್ಥಿಕವಾಗಿ ಮತ್ತು ಲೈಂಗಿಕವಾಗಿ ವ್ಯಕ್ತಿಗಳ ಶೋಷಣೆಯನ್ನು ಮಾಡುವುದು.

ಡಿ) ದೈವಿಕ ಅಥವಾ ಆಧ್ಯಾತ್ಮಿಕ ಶಕ್ತಿ ಸ್ವಾಧೀನವಾಗಿದೆಯೆಂದು ಘೋಷಿಸುವುದು ಮತ್ತು ಅಂಥ ಘೋಷಣೆಯನ್ನು ಬಳಸಿಕೊಂಡು;

1. ಹಣವನ್ನು ಪಡೆದುಕೊಂಡು ಪರಿಹಾರಗಳ ಅಥವಾ ಲಾಭಗಳ ಭರವಸೆಯನ್ನು ಕೊಡುವುದು.

2. ವೈಯಕ್ತಿಕ ಲಾಭಕ್ಕಾಗಿ ದೈವದ ಕೋಪದ ಅಥವಾ ಆತ್ಮದ ಖಂಡನೆಯ ಭಯವನ್ನು ಹುಟ್ಟಿಸುವುದು.

ಇ) ಹಣಕ್ಕಾಗಿ ಇಲ್ಲವೇ ಉಚಿತವಾಗಿ ವಾಮಾಚಾರವನ್ನು (ಬ್ಲ್ಯಾಕ್ ಮ್ಯಾಜಿಕ್) ಅಥವಾ ಮಾಟವನ್ನು ಇತರ ವ್ಯಕ್ತಿಗಳಿಗೆ ತೊಂದರೆಯುಂಟುಮಾಡುವ ಉದ್ದೇಶದಿಂದ ಮತ್ತು ಅವರಿಗೆ ತೀವ್ರವಾಗಿ ಭಯವನ್ನುಂಟು ಮಾಡುವಂತೆ ಬಳಸುವುದು ಅಥವಾ ಮಾಡುವುದು.

ಎಫ್) ದೇಹದೊಳಗೆ ಚುಚ್ಚಿಕೊಳ್ಳುವ ಕೊಕ್ಕೆಯಿಂದ ನೇತಾಡುವಂಥ (ಸಿ.ಡಿ) ಅಥವಾ ದೇಹದೊಳಗೆ ತೂರಿಸಿಕೊಂಡಿರುವ ಕೊಕ್ಕೆಯಿಂದ ರಥವನ್ನು ಎಳೆಯುವಂಥ ಸ್ವದಂಡನೆಯಿಂದ ಗಾಯಗೊಳ್ಳುವ ಮತಾಚರಣೆಗಳನ್ನು ಆಚರಿಸುವಂತೆ ಒತ್ತಾಯಿಸುವುದು, ಹರಡುವುದು ಅಥವಾ ಅದಕ್ಕೆ ಅನುಕೂಲ ಕಲ್ಪಿಸುವುದು.

ಜಿ) ಮಕ್ಕಳ ಕಾಯಿಲೆಯನ್ನು ವಾಸಿ ಮಾಡುವ ಹೆಸರಿನಲ್ಲಿ ಅವರನ್ನು ಹಾನಿಗೊಳಪಡಿಸುವಂಥ ಆಚರಣೆಗಳನ್ನು ಒತ್ತಾಯಿಸುವುದು. ಹರಡುವುದು ಮತ್ತು ಅಂಥ ಆಚರಣೆಗೆ ವಾತವರಣವನ್ನು ಕಲ್ಪಿಸುವುದು;

ಎಚ್) ಮಹಿಳೆಯರ ವಿರುದ್ಧ ಮೂಢನಂಬಿಕೆ ಆಚರಣೆಗಳು:

1. ಋತುಮತಿಯಾದ ಅಥವಾ ಗರ್ಭಿಣಿ ಮಹಿಳೆಯರನ್ನು ಒತ್ತಾಯ ಪೂರ್ವಕವಾಗಿ ಒಂಟಿಯಾಗಿರಿಸುವುದು; ಗ್ರಾಮದೊಳಗೆ ಬಾರದಂತೆ ನಿಷೇಧಿಸುವುದು ಅಥವಾ ಬೇರೆ ಇರಿಸಲು ಅನುಕೂಲ ಕಲ್ಪಿಸುವುದು.

2. ಸಮಾಜದ ದುರ್ಬಲ ವರ್ಗದ ಮಹಿಳೆಯರ ಮೇಲೆ ಬಣ್ಣದ ನೀರನ್ನು ಎರಚುವುದು, ಓಕಿಳಿ ಮೂಲಕ ಅವರನ್ನು ಅವಮಾನಗೊಳಿಸುವುದು ಅಥವಾ ಅವರ ಘನತೆಗೆ ಧಕ್ಕೆಯನ್ನುಂಟು ಮಾಡುವುದು.

3. ಪೂಜೆ ಅಥವಾ ಇನ್ನಿತರ ಯಾವುದೇ ಹೆಸರಿನಲ್ಲಿ ಅವರನ್ನು ಬೆತ್ತಲೆಯಾಗಿ ಪ್ರದರ್ಶಿಸುವುದು, ಉದಾಹರಣೆಗೆ ಬೆತ್ತಲೆಸೇವೆ ಅಂಥ ಅಮಾನವೀಯ ಮತ್ತು ಅವಮಾನಗೊಳಿಸುವ ಆಚರಣೆಗಳಿಗೆ ಅವಕಾಶವನ್ನು ಕಲ್ಪಸುವುದು.

ಐ) 1. ಗರ್ಭಿಣಿಯರನ್ನಾಗಿಸುವುದೂ ಸೇರಿದಂತೆ ಸಾಮಾಜಿಕ ಅಥವಾ ವೈಯಕ್ತಿಕ ಲಾಭವನ್ನು ಉಂಟುಮಾಡುವ ಭರವಸೆಯೊಂದಿಗೆ ಅತಿಮಾನುಷ ಶಕ್ತಿಯನ್ನು ಅಹ್ವಾನಿಸುತ್ತೇವೆ ಎಂದು ಹೇಳುವ ಮೂಲಕ ಮಹಿಳೆಯರನ್ನು ಲೈಂಗಿಕವಾಗಿ ಶೋಷಣೆಗೆ ಒಳಪಡಿಸುವುದು.

2. ಸಾರ್ವಜನಿಕ ಆರೋಗ್ಯಕ್ಕೆ ಹಾನಿಯುಂಟು ಮಾಡುವಂಥ ಕತ್ತನ್ನು ಕಚ್ಚುವ ಮೂಲಕ ಪ್ರಾಣಿಗಳನ್ನು ಕೊಲ್ಲುವ ಆಚರಣೆಗಳನ್ನು (ಗಾವು) ನೆರವೇರಿಸುವಂತೆ ಯಾರೇ ವ್ಯಕ್ತಿಯನ್ನು ಒತ್ತಾಯಿಸುವುದು;

ಜೆ) ಮಾನವ ಘನತೆಯನ್ನು ಉಲ್ಲಂಘಿಸುವಂಥ ಮಡೆಸ್ನಾನ ಅಥವಾ ಸದೃಶ ಆಚರಣೆಗಳಿಗೆ ಅನುಕೂಲ ಕ್ಲಿಕಿಸುವುದು;

ಕೆ) 1. ಮೂಢನಂಬಿಕೆಯ ಹೆಸರಿನಲ್ಲಿ ಜಾತಿ ಅಥವಾ ಲಿಂಗದ ಆಧಾರದ ಮೇಲೆ ತಾರತಮ್ಯ ಕಲ್ಪಿಸುವುದು.

2 ಪಾದರಕ್ಷೆಗಳನ್ನು ಅವನ/ಅವಳ ತಲೆಯ ಮೇಲೆ ಒಯ್ಯುವ ಅವಮಾನಕರ ಆಚರಣೆಗಳನ್ನು ನೆರೆವೇರಿಸುವಂತೆ ಸಮಾಜದ ದುರ್ಬಲ ವರ್ಗಗಳಿಗೆ ಸೇರಿದ ಯಾರೇ ವ್ಯಕ್ತಿಯನ್ನು ಒತ್ತಾಯಿಸುವುದು.

3 ಆಹಾರ ವಿತರಣೆ ಮಾಡುವಾಗ ಜಾತಿ ಆಧಾರದ ವೇಳೆ ಪಂಕ್ತಿಭೇದ ಮಾಡುವಂಥ ಆಚರಣೆಗಳನ್ನ ಮಾಡುವುದು.

**ಮೇಲಿನ ಅಪರಾಧಗಳು ಸಂಜ್ಞೇಯವಾಗಿದ್ದರೆ, ಕೆಳಗಿನವು ಸಂಜ್ಞೇಯವಲ್ಲದ ಅಪರಾಧಗಳು ಅಗಿರತಕ್ಕದ್ದು :**

ಎ) 1) ಯಾರೇ ವ್ಯಕ್ತಿಯ ಜನನದ ಸಮಯ, ಸ್ಥಳದ ಆಧಾರದ ಮೇಲೆ ಆತನಿಗೆ ಕಳಂಕ ಹಚ್ಚುವುದಕ್ಕೆ ಅಥವಾ ಆತನನ್ನು ತೆಗಳುವುದಕ್ಕೆ;

2. ಭವಿಷ್ಯವಾಣಿ ನಿಜವಾಗುತ್ತದೆಂದು ನಂಬಿಸಿ ಅವಮಾನಕರ ಆಚರಣೆಗಳನ್ನು ವ್ಯಕ್ತಿಗಳಿಂದ ಮಾಡಿಸುವುದು.

3. ವ್ಯಕ್ತಿಗಳಿಗೆ ತೀವ್ರ ಹಣಕಾಸು ನಷ್ಟ ಉಂಟಾಗುವುದಕ್ಕೆ ಕಾರಣವಾಗುವ ಹಾನಿಕರ ಭವಿಷ್ಯ ನುಡಿಯುವುದು.

ಬಿ) ಜ್ವಾಲೆಯನ್ನು ಬರಿಗೈಯಿಂದ ಮುಟ್ಟುವಂತೆ ಒತ್ತಾಯಿಸುವ ರೀತಿಯ ದೈಹಿಕ ಅಥವಾ ಮಾನಸಿಕ ಹಾನಿಗೆ ಒಳಪಡಿಸುವ ಮೂಲಕ ಮಾಡುವ ಯಾರೇ ವ್ಯಕ್ತಿಯ ಅಪರಾಧವನ್ನು ಅಥವಾ ನಿರಪರಾಧಿತ್ವವನ್ನು ಘೋಷಿಸುವುದು.

ವಿಧೇಯಕದ ಕರಡಿನ ಕೊನೆಯಲ್ಲಿ ಸರ್ಕಾರವು ಮಾಡಬೇಕಾದ ಇತರೆ ಕಾರ್ಯಗಳ ಸ್ವರೂಪ ಸೂಚಿ ಎಂಬ ಒಂದು ಭಾಗವಿದೆ. ಅದರಲ್ಲಿ ನೀಡಿರುವ ಸಲಹೆಗೂ ಬಹಳ ಉಪಯುಕ್ತವಾಗಿವೆ. ಸರ್ಕಾರವು ಇದನ್ನು ಮಾಡುವುದಾದರೆ, ಮುಂದೆ ಜನಸಾಮಾನ್ಯರಲ್ಲಿ ಮೂಢನಂಬಿಕೆಗಳನ್ನು ತೊಡೆದುಹಾಕಿ, ವೈಚಾರಿಕ ಮನೋವೃತ್ತಿಯನ್ನು ಬೆಳೆಸುವ ಪ್ರಯತ್ನ ಮಾಡುವವರಿಗೂ ಇವು ತುಂಬಾ ಅನುಕೂಲಕರವಾಗಿ ಪರಿಣಮಿಸುತ್ತವೆ.

**ನೀಡಲಾಗಿರುವ ಸಲಹೆಗಳು**

1. ನಾಟಕ, ಬೀದಿನಾಟಕ, ಯಕ್ಷಗಾನ, ಕರಪತ್ರ, ಗೋಡೆ ಬರಹ, ರೇಡಿಯೋ, ಅಂತರ್ಜಾಲ ತಾಣ, ಸಿನಿಮಾ, ಪತ್ರಿಕೋದ್ಯಮ, ಪುಸ್ತಕ ಪ್ರಕಾಶನ, ದೂರದರ್ಶನ, ಧಾರವಾಹಿ, ಸಾಕ್ಷ್ಯಚಿತ್ರ–ಕಿರುಚಿತ್ರ

ನಿರ್ಮಾಣ, ಸಾರ್ವಜನಿಕ ಜಾಹಿರಾತು, ಪಠ್ಯಕ್ರಮ, ಸಭೆ–ಸಮಾವೇಶ–ವಿಚಾರ ಸಂಕೀರಣ ಮುಂತಾದ ಮಾಧ್ಯಮಗಳನ್ನು ಬಳಸಿಕೊಂಡು ಮೌಢ್ಯಗಳನ್ನು ತೊಡೆದುಹಾಕಲು ಒಂದು ಅಭಿಯಾನದ ರೀತಿಯಲ್ಲಿ ವ್ಯಾಪಕ ಪ್ರಚಾರ ಮಾಡಬೇಕು.

2. ಮೌಢ್ಯಕ್ಕೆ ಸಂಬಂಧಿಸಿದ ವಿಚಾರಗಳನ್ನು ತೊಡೆದು ಹಾಕಲು ಶಾಲಾ–ಕಾಲೇಜುಗಳ ಪಠ್ಯಗಳಲ್ಲಿ ವೈಚಾರಿಕತೆಯನ್ನು ಬಿತ್ತುವ, ವೈಜ್ಞಾನಿಕ ಮನೋಭಾವವನ್ನು ಬೆಳೆಸುವ, ಪ್ರಶ್ನಿಸುವ ಮನೋಗುಣ ಮತ್ತು ಆತ್ಮಸ್ಥೈರ್ಯವನ್ನು ತುಂಬುವ ಅರಿವಿನ ಪಠ್ಯವಿಷಯಗಳನ್ನು ಕಡ್ಡಾಯವಾಗಿ ಸೇರಿಸುವಂತಾಗಬೇಕು.
3. ಪರಂಪರಾನುಗತವಾಗಿ ಬಂದ ಜನಪದ ಕಲೆಗಳು, ನಂಬಿಕೆ, ಆಚರಣೆ, ಸಂಪ್ರದಾಯ ಮುಂತಾದವುಗಳು ಧಾರ್ಮಿಕ ಸ್ವರೂಪದವುಗಳಾಗಿದ್ದು ದೇವರು ಧರ್ಮಗಳೊಂದಿಗೆ ಸಂಬಂಧವನ್ನು ಸಾಧಿಸಿವೆ ಇಂಥವುಗಳಿಂದ ಜನಪದ ಕಲೆಗಳನ್ನು ಬೇರ್ಪಡಿಸುವ ಕಾರ್ಯ ಆಗಬೇಕಿದೆ. ಆಗ ಮೌಢ್ಯಭರಿತ ನಂಭಿಕೆಗಳು, ಕಂದಾಚಾರಗಳು ನಿಷ್ಕ್ರಿಯವಾಗುತ್ತವೆ. ಇಂಥ ಸುಧಾರಣಾವಾದಿ ಪ್ರಕ್ರಿಯೆಗೆ ವ್ಯಾಪಕ ಚಾಲನೆ ನೀಡಬೇಕು. ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಜಾನಪದ ವಿಶ್ವವಿದ್ಯಾನಿಲಯ ಅಧಿಕೃತವಾಗಿ ಇಂಥ ಜವಾಬ್ದಾರಿಯನ್ನು ಹೊತ್ತು ನಿರ್ವಹಿಸುವಂತಾಗಬೇಕು. ಜೊತೆಗೆ ಇತರೆ ಸಾರ್ವಜನಿಕ ಮತ್ತು ಖಾಸಗಿ ಸಂಘಸಂಸ್ಥೆಗಳು, ಪ್ರಾಧಿಕಾರಗಳು, ಅಕಾಡೆಮಿಗಳು, ನಿಗಮ–ಮಂಡಳಿಗಳು ಆಡಳಿತ ಯಂತ್ರಾಂಗಳ ಅಂಗಭಾಗಗಳು, ನ್ಯಾಯಾಲಯ ಮುಂತಾದವುಗಳು ತಮ್ಮ ತಮ್ಮ ಕ್ಷೇತ್ರದ ಒಳಗಿರುವ ಮೌಢ್ಯವನ್ನು ಕಳೆಯಲು ಮೂಂದಾಗಬೇಕು.
4. ಮೌಢ್ಯರಹಿತ ಪ್ರಬುದ್ಧ ಕರ್ನಾಟಕವನ್ನು ಕಟ್ಟಲು ಹಾಗೂ ಅಭಿವೃದ್ಧಿಶೀಲ ಕರ್ನಾಟಕವನ್ನು ರೂಪಿಸಲು ವೈಜ್ಞಾನಿಕ ಮಾರ್ಗ ಪ್ರಾಧಿಕಾರವನ್ನು ಸ್ಥಾಪಿಸಬೇಕು ಮತ್ತು ಈ ಪ್ರಾಧಿಕಾರಕ್ಕೆ ಮೌಢ್ಯ ನಿರ್ಮೂಲನದ ಜವಾಬ್ದಾರಿಯೊಂದಿಗೆ, ಸರ್ಕಾರಿ–ಅರೆಸರ್ಕಾರಿ ಹಾಗೂ ಸರ್ಕಾರೇತರ ಸಂಘ–ಸಂಸ್ಥೆಗಳಲ್ಲಿ, ಅನುದಾನಿತ–ಅನುದಾನರಹಿತ ಸಾರ್ವಜನಿಕ ವಲಯಗಳಲ್ಲಿ ಮೂಢನಂಬಿಕೆ ಆಚರಣೆಗಳ ವಿರುದ್ಧ ಕಾರ್ಯಾಚರಣೆ ಮತ್ತು ಮೇಲ್ವಿಚಾರಣೆಯ ಅಧಿಕಾರ ಹಾಗೂ ಒಂದು ಹಂತದವರೆಗೆ ಕಾನೂನಾತ್ಮಕವಾಗಿ ಶಿಕ್ಷಿಸುವ ಅಧಿಕಾರವನ್ನು ನೀಡಬೇಕು.

**ಉಪಸಂಹಾರ**

ಕರ್ನಾಟಕದಲ್ಲಿ ಮೂಢನಂಬಿಕೆ ಆಚರಣೆಗಳ ಪ್ರತಿಬಂಧಕ ವಿಧೇಯಕ 2013 ಕಾನೂನುಗಳನ್ನು ಜಾರಿಮಾಡಲು ಕರ್ನಾಟಕದಲ್ಲಿ ಬಹುದೊಡ್ಡ ಸವಾಲಾಗಿದೆ. ಮೌಢ್ಯಗಳ ಸರಮಾಲೆಯನ್ನು ಸೃಷ್ಟಿಸಿ ವೈದಿಕಶಾಹಿ ಮೂಲನಿವಾಸಿಗಳನ್ನು ಅಸಹಾಯಕತೆ, ಅಸಮಾನತೆ, ತಾರತಮ್ಯ ಮತ್ತು ಶೋಷಣಾ ಪ್ರವೃತ್ತಿಗಳಿಗೆ ಗುರಿಪಡಿಸಿದೆ. ವಾಮಚಾರದ ಹೆಸರಿನಲ್ಲಿ ಮಹಿಳೆಯರ ಮೇಲೆ ಅತ್ಯಾಚಾರ ಮತ್ತು ಹತ್ಯೆ, ಇಂತಹ ಕ್ರೌರ್ಯಗಳನ್ನು ಅಧಿಕಾರಿಗಳು ಮತ್ತು ಕಾನೂನು ವ್ಯವಸ್ಥೆ ನಿರ್ಲಕ್ಷಿಸಲು ಸಾಧ್ಯವಿಲ್ಲ. ಸಂವಿಧಾನದವು ಧಾರ್ಮಿಕ ಸ್ವಾತಂತ್ರ್ಯವನ್ನು ಅನುಮತಿಸುತ್ತದೆ ಆದರೆ ಅದು ರಾಜ್ಯದ ವಿರುದ್ದವಾಗಿರಲು

ಸಾಧ್ಯವಿಲ್ಲ. ಸಾರ್ವಜನಿಕ ಹಿತದೃಷ್ಟಿಯಿಂದ ಮಾಡಿದ ಕಾನೂನುಗಳು ರಾಜ್ಯದಲ್ಲಿ ಧಾರ್ಮಿಕ ಆಚರಣೆಗಳ ವಿರುದ್ದ ಸಾರ್ವಜನಿಕ ಸುವ್ಯವಸ್ಥೆ, ನೈತಿಕತೆ, ಆರೋಗ್ಯ, ಮೂಲಭೂತ ಹಕ್ಕುಗಳು ಮುಂತಾದವುಗಳನ್ನು ನಿರ್ಬಂಧಿಸಬಹುದು. ಧರ್ಮದ ಹೆಸರಿನಲ್ಲಿ ಅಮಾನವೀಯತೆಯನ್ನು ಉಂಟುಮಾಡಲು ಸಾಧ್ಯವಿಲ್ಲ, ಇದು ಸತಿ ಆಚರಣೆಯಾಗಿದ್ದು, ಇದನ್ನು ಧರ್ಮದ ಹೆಸರಿನಲ್ಲಿ ನಡೆಸಲಾಗುತ್ತದೆ ಎಂದು ನಂಬಲಾಗಿತ್ತು, ಆದರೆ ಇದು ಮಹಿಳೆಯನ್ನು ಕುಟುಂಬ ಮತ್ತು ಸಂಬಂಧಿಕರ ಹಾದಿಯಿಂದ ತೆಗೆದುಹಾಕಲು, ಇದರಿಂದ ಪುರುಷನ ಆಸ್ತಿಯನ್ನು ಅವರು ಯಾವುದೇ ವಿಭಜನೆ ಅಥವಾ ಅಡೆತಡೆಗಳಿಲ್ಲದೆ ಅನುವಂಶಿಕವಾಗಿ ಪಡೆಯಬಹುದು. ಒಬ್ಬನು ಅವನ ಅಥವಾ ಅವಳ ಹಕ್ಕುಗಳನ್ನು ಅನುಭವಿಸುವುದಕ್ಕೆ ಅಸಂಗತವಾಗಬಾರದು. ಮೂಢನಂಬಿಕೆಗಳ ದುಷ್ಕೃತ್ಯಗಳನ್ನು ತೊಡೆದುಹಾಕಲು ಸರ್ಕಾರದ ಆಜ್ಞೆ ಹೆಚ್ಚಿನ ಶಾಸನಗಳ ಅಗತ್ಯವಿದೆ. ಧರ್ಮದ ಸೋಗು ಧರಿಸಿ ಮೌಢ್ಯವನ್ನು ಬಿತ್ತಿ ವೈಚಾರಿಕತೆಯ ಪ್ರಾಣ ತೆಗೆಯುವುದು ಸಂವಿಧಾನದ ಆಶಯಗಳಿಗೆ ವಿರುದ್ಧವಾಗಿದೆ. ದಲಿತ ಬಂಡಾಯ, ಪ್ರಗತಿಪರ ಸಂಘಟನೆಗಳು ಮತ್ತು ಪ್ರಗತಿಪರ ಚಿಂತಕರು ಧರ್ಮ ನಿರಪೇಕ್ಷತೆ, ವೈಜ್ಞಾನಿಕತೆ, ವೈಚಾರಿಕತೆ ಮತ್ತು ಮಾನವೀಯತೆಗಳ ಆಧಾರದ ಮೇಲೆ ಪ್ರಗತಿಶೀಲ ಸಮಸಮಾಜವನ್ನು ನಿರ್ಮಿಸುವ ಜವಾಬ್ದಾರಿಯನ್ನು ನೂತನ ಸಹಸ್ರಮಾನದಲ್ಲಿ ಹೊಂದಿದ್ದು ಕಾನೂನು ಬಹಳ ಮುಖ್ಯವಾಗುತ್ತದೆ ಇದಕ್ಕೆ ಅಲವಾರು ಸಂಘಟನೆಗಳು ಪ್ರಗತಿಪರ ಸಂಘಟಕರ ಫಲವೇ 2013ರ ಮಸೂದೆ ಅಂಗೀಕರಿಸಲು ಕಾರಣವಾಗುತ್ತದೆ.

**ಪರಾಮರ್ಶನ ಗ್ರಂಥಗಳು**


- ಅಬ್ದುಲ್ ರೆಹಮಾನ್ ಪಾಷ ಎಂ. (2014). *ನಂಬಿಕೆ ಮೂಢನಂಬಿಕೆ ವೈಜ್ಞಾನಿಕ ಮನೋವೃತ್ತಿ.* (ಮೊದಲನೆ ಮುದ್ರಣ). ನವಕರ್ನಾಟಕ ಪ್ರಕಾಶನ.
- ಜೋಗನ್ ಶಂಕರ್. (1993). *ದೇವದಾಸಿ ಸಂಪ್ರದಾಯ.* ವಿಮೋಚನಾ ಪ್ರಕಾಶನ,
- *ಕರ್ನಾಟಕ ಆರ್ಥಿಕ ಸಮೀಕ್ಷೆ 2019–20* (2020, ಮಾರ್ಚ್), ಯೋಜನೆ ಮತ್ತು ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ.
- ಕೋಸಂಬಿ. ಡಿ.ಡಿ. (1962). *ಮಿಥ್ ಅಂಡ್ ರಿಯಾಲಿಟಿ.* ಪಾಪ್ಯುಲರ್ ಪ್ರಕಾಶನ.
- ಕುವೆಂಪು. (1976). ವಿಚಾರ ಕ್ರಾಂತಿಗೆ ಆಹ್ವಾನ. ಉದಯರವಿ ಪ್ರಕಾಶನ.
- ಮನೆ ಆರ್ ವಿ. (215, ನವೆಂಬರ್ 2020). ಕರ್ನಾಟಕ ಮೂಢನಂಬಿಕೆ ಆಚರಣೆಗಳು ಪ್ರತಿಬಂಧಕ ವಿಧೇಯಕ–2013 https://rv-mane.blogspot.com/2015/11/2013.html
- ಮಂಜುನಾಥ ಬೇವಿನಕಟ್ಟೆ. (2007). ಕನ್ನಡ ಜನಪದ ನಂಬಿಕೆಗಳು. ಜ್ಯೋತಿ ಪ್ರಕಾಶನ
- *ಮೂಢನಂಬಿಕೆಗಳು.* (2015, ನವೆಂಬರ್). *ಜನಶಕ್ತಿ ಕನ್ನಡ ದಿನಪ್ರತಿಕೆ.* 9(48),
- ನಾಗರಾಜಪ್ಪ. ಕೆ.ಜಿ. (1998). *ಗುಪ್ತ ಸಮಾಜಗಳು, ಇಕ್ಕಟ್ಟು–ಬಿಕ್ಕಟ್ಟು.* ಪ್ರಣತಿ ಪ್ರಕಾಶನ,
- ಶಂಬಾಜೋಷಿ. (1966). *ಕರ್ನಾಟಕ ಸಂಸ್ಕೃತಿ ಪೂರ್ವಪೀಠಿಕೆ.* ಸಮಾಜ ಪುಸ್ತಕಾಲಯ,
- ಸಿದ್ಧಲಿಂಗಯ್ಯ. (1997). *ಗ್ರಾಮದೇವತೆಗಳು.* ಮೂಲಭಾರತಿ ಪ್ರಕಾಶನ.